**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**

**ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 628/2019 CW-1 PW-1**

**ಸಾಕ್ಷಿಯನ್ನು ದಿಃ 16.11.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ದೇವರಾಜು |
| ತಂದೆಯ ಹೆಸರುಃ | ಮಲ್ಲೇಗೌಡ |
| ವಯಸ್ಸುಃ | 53 |
| ವೃತ್ತಿಃ | ಎಲ್.ಐ.ಸಿ ಏಜೆಂಟ್ |
| ವಾಸ ಸ್ಥಳಃ | ಚನ್ನರಾಯಪಟ್ಟಣ |

**ಮುಖ್ಯವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸ-2 ನನ್ನ ಹೆಂಡತಿ. ಚಾಸ-3 ರಿಂದ 5 ಗೊತ್ತು. ಆರೋಪಿತರು ನನಗೆ ಗೊತ್ತು. ಆರೋಪಿತರು ನಮ್ಮ ಪಕ್ಕದ ಮನೆಯರು. ನಮ್ಮ ಮತ್ತು ಆರೋಪಿಗಳ ಮನೆಯ ನಡುವೆ 14 ಅಡಿ ರಸ್ತೆ ಇರುತ್ತದೆ. ದಿಃ 08-06-2019 ರಂದು ಚಾಸ-2 ರವರು ನಮ್ಮ ಮನೆಯಿಂದ ಹೊರಗೆ ಹೋದಾಗ ಆರೋಪಿಗಳು ಚಾಸ-2 ರವರಿಗೆ ಬೈಯ್ಯುತ್ತಿದ್ದಾಗ, ಅದನ್ನು ಚಾಸ-2 ರವರು ಪ್ರಶ್ನೆ ಮಾಡಲಾಗಿ, ನಂತರ ನಾನು ಸಹ ಆರೋಪಿಗಳನ್ನು ಪ್ರಶ್ನೆ ಮಾಡಿರುತ್ತೇನೆ. ಆಗ ಆರೋಪಿಗಳು ನನ್ನನ್ನು ಕುರಿತು ಅವಾಚ್ಯ ಶಬ್ದಗಳಿಂದ ಬೈದು, 1 ನೇ ಆರೋಪಿ ನನ್ನ ತಲೆಗೆ ರಾಡಿನಿಂದ ಹೊಡೆದು ಹಲ್ಲೆ ಮಾಡಿರುತ್ತಾನೆ, ಚಾಸ-2 ರವರ ತಲೆಗೆ 2 ನೇ ಆರೋಪಿ ಕಲ್ಲಿನಿಂದ ಹೊಡೆದಿರುತ್ತಾರೆ. ನಂತರ ಚಾಸ-3 ರವರು ನಮ್ಮನ್ನು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತಾರೆ. ಆರೋಪಿಗಳು ಆ ಸಮಯದಲ್ಲಿ ಪ್ರಾಣ ಬೆದರಿಕೆ ಹಾಕಿರುತ್ತಾರೆ. ಆ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಈಗ ಸಾಕ್ಷಿಗೆ ಸದರಿ

ಹೇಳಿಕೆಯನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ಗುರುತಿಸಿದ ಮೇರೆಗೆ ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ಒಂದು ಮಹಜರ್ ಅನ್ನು ತೋರಿಸಲಾಗಿ ಸಾಕ್ಷಿಯ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸದರಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 09-06-2019 ರಂದು ನಮ್ಮ ಮನೆಯ ಹತ್ತಿರ ಪೋಲೀಸರು ಮಹಜರ್ ಗೆ ಬಂದಾಗ ಮಾಡಿರುತ್ತೇನೆ. ಆ ಸಮಯದಲ್ಲಿ ಪೋಲೀಸರು ಹಲ್ಲೆಗೆ ಬಳಸಲಾದ ಕಬ್ಬಿಣದ ರಾಡು, ಕಲ್ಲು ಮತ್ತು ನನ್ನ ಬಟ್ಟೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ದೀಪು.ಬಿ.ಸಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**